ವಿ.ಸಿ. ಅಚ್ಚುಕಟ್ಟಿನಲ್ಲಿ ಸಂಪರ್ಕ ನಾಲೆಯಿಂದ ಕಾವೇರಿ ಶಾಖೆ ನಾಲೆಗೆ ನೀರು ಬಿಡಲು ನಿರ್ಮಿಸಿರುವ ಸುರಂಗ

1372 (2024) ಶ್ರೀ ಆತ್ಮಾನಂದ.ಎಂ.ಎಸ್ (ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿ.ಸಿ. ಅಚ್ಚುಕಟ್ಟಿನ ಸಂಪರ್ಕ ನಾಲೆಯಿಂದ ಕಾವೇರಿ ಶಾಖೆಯ ನಾಲೆಗೆ ನೀರು ಅಲಗೂಡು ಬಳಿ ಸುರಂಗ (ಟನಲ್) ನಿರ್ಮಾಣ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಈ ಟನಲ್ (ಸರುಂಗ) ನಿರ್ಮಾಣದ ವೆಚ್ಚ ಎಷ್ಟು ;

ಇ) ಈ ಟನಲ್ನ (ಸುರಂಗ) ನಿರ್ಮಾಣವುಪೂರ್ಣಗೊಂಡಿದೆಯೇ;

ಈ) ಹಾಗಿಲ್ಲದಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ?

ಶ್ರೀ ಎಚ್. ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟಿನ ಸಂಪರ್ಕ ನಾಲೆಯಿಂದ ಕಾವೇರಿ ಶಾಖೆಗೆ ನೀರು ಬಿಡಲು ಅಲಗೂಡು ಬಳಿ ಸಂಪರ್ಕ ನಾಲೆಯ ಸರಪಳಿ : 16700 ರಿಂದ 18100 ಮೀ. ವರೆಗೆ ಸುರಂಗ ನಿರ್ಮಾಣ ಮಾಡಲಾಗಿದೆ.

ಆ) ಸುರಂಗ ಕಾಮಗಾರಿಯ ಅಂದಾಜು ಮೊತ್ತ ರೂ. 9 ಕೋಟಿ. ಈವರೆಗೆ ಸುರಂಗ ಕಾಮಗಾರಿಗೆ ಆಗಿರುವ ವೆಚ್ಚ ರೂ. 16. 65 ಕೋಟಿ ಸುರಂಗ ಕಾಮಗಾರಿ ಸಂಪೂರ್ಣಗೊಳ್ಳಲು ತಗಲುವ ಒಟ್ಟುಖರ್ಚು ರೂ. 18 ಕೋಟಿಗಳಾಗುತ್ತದೆ.

ಇ) ಸುರಂಗ ಕಾಮಗಾರಿಯ ನಿರ್ಗಮನ ಭಾಗದ ಲೈನಿಂಗ್ ಕಾಮಗಾರಿ ಹೊರತುಪಡಿಸಿ ಸುರಂಗ ನಿರ್ಮಾಣವು ಸಂಪೂರ್ಣಗೊಂಡಿರುತ್ತದೆ.

ಈ) ಉಳಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ 2000ದ ಮೇ ಅಂತ್ಯದೊಳಗೆ ಸುರಂಗ ಕಾಮಗಾರಿಯ ಪೂರ್ಣಗೊಂಡು ಜೂನ್ ತಿಂಗಳಿಂದ ನಾಲೆಯಲ್ಲಿ ನೀರು ಬಿಡುವ ಕಾರ್ಯಕ್ರಮ ಇರುತ್ತದೆ.

ಪಿರಿಯಾ ಪಟ್ಟಣ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಕೆರೆಗಳು

1373 (1828) ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯ ಪಿರಿಯಾಪಟ್ಟಣಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಅಚ್ಚು ಕಟ್ಟು ಎಷ್ಟು?

ಆ) ಈ ಕೆರೆಗಳ ದುರಸ್ತಿಗೆ ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಿರುವ ಹಣ ಎಷ್ಟು? ಹಾಗೂ ಯಾವ ಯಾವ ಕೆರೆಗಳಿಗೆ ಎಷ್ಟೆಷ್ಟು ವೆಚ್ಚ ಮಾಡಲಾಗಿದೆ.